**ದಿಃ 12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

3. ನನ್ನ ಜಮೀನದ ಪೂರ್ವ ಮತ್ತು ದಕ್ಷಿಣದ ಮೂಲೆಯಲ್ಲಿ ತೆರೆದ ಬಾವಿಯಿರುತ್ತದೆ ಎಂದರೆ ಸರಿ. ಅದಕ್ಕೆ ಈಗ ವಿದ್ಯುಚ್ಛಕ್ತಿ ಮೋಟಾರ ಅಳವಡಿಸಲಾಗಿದೆ ಎಂದರೆ ಸರಿ. ಸದರಿ ಬಾವಿಯಿಂದ ನನ್ನ ಮತ್ತು ಪ್ರತಿವಾದಿಯರ ಜಮೀನಿಗೆ ನೀರು ಹಾಯಿಸಲು ಪೈಪಲೈನ ಹಾಕಲಾಗಿದೆ ಎಂದರೆ ಸರಿಯಲ್ಲ. ತೆರೆದ ಬಾವಿಗೆ ಪ್ರತಿವಾದಿಯರು ಪ್ರತ್ಯೇಕ ಮೋಟಾರ ಅಳವಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಇಲ್ಲದ ಸಮಯದಲ್ಲಿ ಅವರು ನೀರು ಹೊಡೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ವಿದ್ಯುಚ್ಛಕ್ತಿ ಮೋಟಾರನ್ನು ಶಾಶ್ವತವಾಗಿ ಅಳವಡಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ಜಮೀನುಗಳಿಗೆ ಪ್ರತ್ಯೇಕವಾಗಿ ಪೈಪಲೈನ ಹಾಕಲಾಗಿದೆ ಎಂದರೆ ಸರಿಯಲ್ಲ.

4. ನಮ್ಮ ಜಮೀನಿನಲ್ಲಿ ಸುಮಾರು 5-6 ವರ್ಷಗಳಿಂದ ಕಬ್ಬು ಬೆಳೆಯುತ್ತಿದ್ದೇವೆ. ಅದಕ್ಕೂ ಮುಂಚೆ ತೊಗರಿ ಬೆಳೆಯುತ್ತಿದ್ದೇವು. ಪ್ರತಿವಾದಿಯರ ಹೊಲದಲ್ಲಿ ನೀರಾವರಿ ಬೆಳೆಗಳಾದ ಹಣ್ಣು, ತರಕಾರಿ ಮತ್ತು ಟೆಂಗಿನಗಿಡಗಳು ಇವೆ ಎಂದರೆ ನಾನು ನೋಡಿಲ್ಲ. ನಮ್ಮ ಜಮೀನಿಗೆ ಪ್ರತಿವಾದಿಯ ಜಮೀನಿನ ಪಶ್ಚಿಮ ಬದುವಿನಲ್ಲಿರುವ ರಸ್ತೆ ಮೂಲಕ ಹೋಗಬೇಕು ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಒಂದೇ ದಿನ ಒಂದೇ ಜಮೀನಿನ ಎರಡು ಭಾಗಗಳನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿ. ಪ್ರತಿವಾದಿಯ ಪಶ್ಚಿಮ ಬದುವಿನಲ್ಲಿ ರಸ್ತೆ ಇರುವ ಬಗ್ಗೆ ಕ್ರಯಪತ್ರದಲ್ಲಿ ಬರೆಸಿಲ್ಲ. 1 ನೇ ಪ್ರತಿವಾದಿಯ ಜಮೀನಿನಲ್ಲಿ ನಮ್ಮ ಜಮೀನಿಗೆ ಹೋಗಲು ಹೊಲದ ರಸ್ತೆ ಇದೆ. ಸದರಿ ರಸ್ತೆಯಲ್ಲಿ ನಾವು ಒಬ್ಬರೇ ಓಡಾಡುತ್ತೇವೆ. ಅಲ್ಲಿ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯ ಬಗ್ಗೆ ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ತಂಟೆ ತಕರಾರು ಇವೆ ಎಂದರೆ ಸರಿಯಲ್ಲ.

ನಾನು 1 ನೇ ಪ್ರತಿವಾದಿಗೆ ನಮ್ಮ ಜಮೀನಿಗೆ ಓಡಾಡಲು ರಸ್ತೆ ಬಿಟ್ಟುಕೊಡು ಎಂದು ಕೇಳಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ರಸ್ತೆ ಬಿಡುವುದಿಲ್ಲ ಎಂದಿದ್ದಕ್ಕೆ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಾವಿ ನೀರಿನ ಬಗ್ಗೆ ತಕರಾರು ಮಾಡಿ ದಾವೆ ಸಲ್ಲಿಸಿದ ನಂತರ ಪ್ರತಿವಾದಿಯರು ತಮ್ಮ ಜಮೀನಿನಲ್ಲಿ ಬೋರ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಬೋರ 30 ವರ್ಷದ ಹಿಂದೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಬಾವಿಗೆ ಇರುವ ಪೈಪಲೈನಗಳ ಬಗ್ಗೆ ಪರಿಶೀಲಿಸಲು ಕೋರ್ಟ ಕಮೀಶನರ ನೇಮಕ ಮಾಡಿದರೆ ತೊಂದರೆ ಇಲ್ಲ ಎಂದರೆ ಸರಿ.

5. ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಮನೆತನದ ಆಸ್ತಿಗಳಲ್ಲಿ ವಾಟ್ನಿ ಆಗಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರಿಗೆ ಗೊತ್ತು ಎಂದು ನುಡಿದು, ನಂತರ ವಾಟ್ನಿಯಾಗಿದೆ ಎಂದು ನುಡಿಯುತ್ತಾರೆ. ವಾಟ್ನಿಯಾದ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ. ವಾಟ್ನಿಯಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ಕೊಡಬೇಕೆನ್ನುವ ಕಾರಣಕ್ಕೆ ನಾನು ಖರೀದಿ ಹಿಡಿದ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಬಾವಿಯಿಂದ ಒತ್ತಾಯವಾಗಿ ನೀರು ಪಡೆಯುವಾಗ ನೀರು ತೆಗೆದುಕೊಳ್ಳಬೇಡಿ ಎಂದು ನಾನು ಹೇಳಿಲ್ಲ. ಪ್ರತಿವಾದಿಯರು ಜೋರಾವರಿ ಮಾಡಿ ನೀರು ಪಡೆದಿಲ್ಲ ಎಂದರೆ ಸರಿ. ನನ್ನ ಜಮೀನಿಗೆ ನಾವು ಹೋಗಿ ಬರಲು, ಬಿತ್ತಿಬೆಳೆಯಲು ಪ್ರತಿವಾದಿಯರು ನಮಗೆ ಯಾವುದೇ ತೊಂದರೆ ಮಾಡಿಲ್ಲ. ಪ್ರತಿವಾದಿಯರು ಬಾವಿಯಿಂದ ನಾವು ನೀರು ತೆಗೆದುಕೊಳ್ಳುತ್ತೇವೆ, ಬಿಡಲಿಲ್ಲ ಎಂದರೆ ನಿನ್ನನ್ನು ಹೊಲದಿಂದ ಹೊರಗೆ ಹಾಕುತ್ತೇವೆ ಎಂದು ಧಮಕಿ ಹಾಕಿರುತ್ತಾರೆ. ಆದರೆ ಯಾವ ದಿನ ಎಂದು ನೆನಪಿಲ್ಲ. ಅದರ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿಲ್ಲ. ಅದರ ಬಗ್ಗೆ ನಾನು ಹಿರಿಯರಿಂದ ಬುದ್ದಿ ಹೇಳಿಸಿಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.